(ಸಾಕ್ಷಿಯನ್ನು ದಿನಾಂಕಃ 17.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಬಿ ಎ ಜಿ ರವರಿಂದ**

ನನ್ನ ತಂದೆಯ ಹೆಸರು ಚೆನ್ನವೀರಯ್ಯ ಆಗಿರುತ್ತದೆಯೆಂದರೆ ಸರಿಯಲ್ಲ. ಹೊನ್ನಹಲಗೇಗೌಡ ನನ್ನ ತಾತ ಆಗಿರುತ್ತಾರೆಂದರೆ ಸರಿಯಲ್ಲ. ಹೊನ್ನಲಗೇಗೌಡ ಮತ್ತು ಹೊನ್ನೇಗೌಡ ಇಬ್ಬರೂ ಅಣ್ಣತಮ್ಮಂದಿರಾಗಿರುತ್ತಾರೆಂರದೆ ಸಾಕ್ಷಿಯು ನನಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಈರಯ್ಯ ಅವರ ತಮ್ಮ ತಮ್ಮೇಗೌಡ ಮತ್ತು ಇನ್ನೊಬ್ಬರು ಚೆನ್ನವೀರೇಗೌಡ ಆಗಿರುತ್ತಾರೆ. ಸದರೀ ಮೂರೂ ಜನ ಹೊನ್ನಹಲಗೇಗೌಡರ ಮಕ್ಕಳಾಗಿರುತ್ತಾರೆಂದರೆ ಸರಿಯಲ್ಲ ಹೊನ್ನೇಗೌಡನಿಗೆ ಚಿಕ್ಕಮ್ಮ, ಚಿಕ್ಕಣ್ಣಮ್ಮ, ಮತ್ತು ಕಾಳಮ್ಮ ಎಂಬುವ ಮೂರು ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೂರು ಜನ ಗಂಡು ಮಕ್ಕಳಿದ್ದು, ಸದರಿಯವರು ಈರಯ್ಯ, ತಮ್ಮೇಗೌಡ ಮತ್ತು ಚೆನ್ನವೀರೇಗೌಡ ಆಗಿರುತ್ತಾರೆ. ಚಿಕ್ಕಮ್ಮ (4 ನೇ ಪ್ರತಿವಾದಿ) ನನ್ನ ಚಿಕ್ಕಪ್ಪ ಚೆನ್ನವೀರೇಗೌಡರ ಮಗಳಾಗಿರುತ್ತಾರೆ. ವಾದಿ ನನ್ನ ಚಿಕ್ಕಪ್ಪ ತಮ್ಮೇಗೌಡರವರ ಮಗಳಾಗಿರುತ್ತಾಳೆ. ವಾದಿ ಮತ್ತು 4 ನೇ ಪ್ರತಿವಾದಿಯರ ಗಂಡಂದಿರ ಹೆಸರು ಸಿದ್ದೇಗೌಡ ಆಗಿರುತ್ತದೆಯೆಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಅವರ ಆಸ್ತಿಗಳನ್ನು ಯಾವ ರೀತಿ ಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ವಿಭಾಗಕ್ಕೆ ಬಂದಿದ್ದ ಆಸ್ತಿಗಳು ನನಗೆ ಗೊತ್ತಿದೆ. ತಮ್ಮೇಗೌಡನಿಗೆ ನನ್ನ ತಂದೆಯ ಪಕ್ಕದಲ್ಲಿಯೇ ಆಸ್ತಿ ವಿಭಾಗಕ್ಕೆ ಬಂದಿರುತ್ತದೆ, ಆದರೆ ಸರ್ವೇ ನಂಬರ್ ಗಳು ನನಗೆ ನೆನಪಿರುವುದಿಲ್ಲ. ನನ್ನ ತಂದೆಗೆ ಒಟ್ಟು 2 ಸರ್ವೇ ನಂಬರ್ ಆಸ್ತಿ ವಿಭಾಗಕ್ಕೆ ಬಂದಿದ್ದು,

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಲಾಗಿ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ ಮದ್ದೂರು.